## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1341 |
| ಸದಸ್ಯರ ಹೆಸರು | : | ಶ್ರೀ ಅ.ದೇವೇಗೌಡ |
| ಉತ್ತರಿಸುವ ದಿನಾಂಕ | : | 24-12-2021 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು. |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ, ಶ್ರೀಗಂಧದಕಾವಲು ಸರ್ವೇ ನಂ.70/3ಎ ರಲ್ಲಿ 2 ಎಕರೆ 29 ಗುಂಟೆ ಜಮೀನು ಇದ್ದು, ಆ ಜಮೀನಿನಲ್ಲಿ ನಂ.ಎಲ್.ಎ.ಕ್ಯೂ.ಸಿಆರ್. 4/97/98, ದಿನಾಂಕ: 30.04.1997 ರಂತೆ ಉಪ ವಿಭಾಗಾಧಿಕಾರಿಗಳವರ ಆದೇಶದಂತೆ ನಂ.ಎಲ್.ಎ.ಕ್ಯೂ.ಸಿ.ಎಸ್.ಆರ್:547 ದಿನಾಂಕ: 10.03.1976 ರ ಗೆಜೆಟ್ ನೋಟಿಫಿಕೇಷನ್‌ರಂತೆ ಮತ್ತು ವಿಶೇಷ ತಹಶೀಲ್ದಾರ್ ಬೆಂಗಳೂರು ಉತ್ತರ ತಾಲ್ಲೂಕುರವರ ನಂ.ಎಂ.ಆರ್.ಆರ್.ಟಿ.610/1997-98 ದಿನಾಂಕ: 19.12.1997 ರ ಆದೇಶದಂತೆ ಭೂ-ಸ್ವಾಧೀನವಾಗಿದ್ದು, ಸರ್ಕಾರದ ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ 32 ಗುಂಟೆ ಜಮೀನು ವಿಸ್ತೀರ್ಣ ಆಕ್ವಿಸೇಷನ್ ಆಗಿರುವುದೇ ; | ರೆಕಾರ್ಡ್ ಆಫ್ ರೈಟ್ಸ್, ಗೇಣಿ ಮತ್ತು ಪಹಣಿ ಪತ್ರಿಕೆ (RTC) ನಲ್ಲಿ 70/3 ಎ 0.32 ಗುಂಟೆ ಜಮೀನನ್ನು IHC 3/94-95 ಒಖ 1/97-98 LAQCR 4 /97-98 date 30.4.97 ರಂತೆ ಭೂಸ್ವಾಧಿನವಾಗಿರುತ್ತದೆ. (ಪಹಣಿ ಲಗತ್ತಿಸಿದೆ) |
| ಆ) | ಸದರಿ 32 ಗುಂಟೆ ಜಮೀನಿನಲ್ಲಿ 07 ಗುಂಟೆ ಖರಾಬ್ ಇದ್ದು, ಉಳಿಕೆ 25 ಗುಂಟೆ ಸರ್ಕಾರದ ಜಮೀನನ್ನು ಉಪ ನೋಂದಣಾಧಿಕಾರಿ ಕಛೇರಿಯಲ್ಲಿ ನಕಲಿ ಪಹಣಿಯನ್ನು ಸೃಷ್ಟಿ ಮಾಡಿಕೊಂಡು ಕ್ರಯ ಪತ್ರ ಮಾಡಿ ಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಮೇಲಿನಂತೆ ಪಹಣಿ ಲಗತ್ತಿಸಿದೆ. |
| ಇ) | ನಿರಾಶ್ರಿತರ ಪರಿಹಾರ ಕೇಂದ್ರದ ಜಾಗವನ್ನು ಹಾಗೂ ದಾಖಲೆಗಳನ್ನು ಕಾಪಾಡಿಕೊಳ್ಳುವಲ್ಲಿ ಸರ್ಕಾರ ಕೈಗೊಂಡ ಕ್ರಮವೇನು ? | ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ ಸರ್ಕಾರದಿಂದ ಮಂಜೂರು ಮಾಡಲಾಗಿರುವ ಜಮೀನಿಗೆ ಸಂಬಂದಿಸಿದ ಆದೇಶಗಳು ಹಾಗೂ ದಾಖಲೆಗಳು ಕಛೇರಿಯಲ್ಲಿ ಲಭ್ಯವಿರುತ್ತವೆ. ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ ಮಂಜೂರಾಗಿರುವ ಜಮೀನಿಗೆ ಕಾಂಪೌಂಡ್ ಗೋಡೆ ನಿರ್ಮಾಣ ಮಾಡಲಾಗಿದ್ದು, ಕೆಲವು ಕಡೆ ಕೇಂದ್ರದ ಜಮೀನಿನ ಅಕ್ಕಪಕ್ಕದಲ್ಲಿ ಖಾಸಗಿಯವರ ಜಮೀನುಗಳು ಇರುವುದರಿಂದ ಸರ್ವೆ ಮಾಡಿಸಿ, ಗಡಿ ಗುರುತಿಸಿ ಕಾಂಪೌಂಡ್ ಗೋಡೆ ನಿರ್ಮಾಣ ಮಾಡಲು ಕ್ರಮಕೈಗೊಳ್ಳಲಾಗಿದೆ. |

| | | |
|---|---|---|
| | | ಸದರಿ ಜಮೀನನ್ನು ಸರ್ವೆ ನಡೆಸಿ ಗಡಿ ಗುರುತಿಸಿಕೊಡುವಂತೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಬೆಂಗಳೂರು ಉತ್ತರ ತಾಲ್ಲೂಕು ರವರನ್ನು ದಿ:07.04.2021 & 13.7.2021 ರ ಪತ್ರಗಳಲ್ಲಿ ಹಾಗೂ ದಿ:20.5.2016/ 03.11.2016/ 14.6.2018/ 06.06.2020 ಮತ್ತು ದಿ:29.10.2021 ರ ಪತ್ರಗಳಲ್ಲಿ ತಹಶೀಲ್ದಾರ್ ಬೆಂಗಳೂರು ಉತ್ತರ ತಾಲ್ಲೂಕು ರವರನ್ನು ಸಹ ಕೋರಲಾಗಿದೆ. |

ಸಕಇ 613 ಎಸ್‌ಎಲ್‌ಪಿ 2021

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು